# 'ಜವಾಬ್ದಾರಿಯುತ ಪಾತ್ರ ಎನ್ನುವುದೇ ಖುಷಿ'

## ಅನುಷ ಹೆಗಡೆ
### ಉದಯದ 'ಅನುಪಲ್ಲವಿ'ಯ ಪಲ್ಲವಿ

■ ರಾಘವೇಂದ್ರ ಕೆ.

◆ **ತಾಯ್ತನದ ಮಮತೆಯ ಜೊತೆ ಅದರ ಮೌಲ್ಯ ಬಿಂಬಿಸುವ ಪಾತ್ರವನ್ನು ಹೇಗೆ ಅನುಭವಿಸುತ್ತಿದ್ದೀರಿ?**

ಮಾತೃ ವಾತ್ಸಲ್ಯದ ನಿರ್ವಹಣೆ ತುಂಬ ಜವಾಬ್ದಾರಿಯ ಕೆಲಸವಾದರೂ ಚೆನ್ನಾಗಿದೆ. ಬಹುಬೇಗ ದೊಡ್ಡ ಪಾತ್ರವೊಂದನ್ನು ಮಾಡುತ್ತಿದ್ದೇನೆ ಎನ್ನುವ ಭಾವನೆ ಇದೆ. ತಾಯಿಯಾಗಿ ಮಾಡಿದರೆ, ಅದು ಭವಿಷ್ಯದಲ್ಲಿ ನಮ್ಮ ವೃತ್ತಿ ಬದುಕಿಗೆ ಅಡ್ಡಿ ಆಗಬಹುದೇ ಎನ್ನುವ ಅನುಮಾನವನ್ನು ಅನೇಕರು ಎದುರಿಸುತ್ತಾರೆ. ನನಗೆ ಹಾಗೆ ಅನ್ನಿಸಲಿಲ್ಲ. ಮಗುವಿಗೆ ತಾಯಿ ಆಗಿದ್ದೇನೆ ಅಂದರೆ ಒಂದು ಪಾತ್ರಕ್ಕೆ ಜೀವ ತುಂಬುತ್ತಿದ್ದೇನೆ ಎನ್ನುವುದೇ ಮುಖ್ಯ ಅನ್ನಿಸಿತು. ಇಂತಹ ಜವಾಬ್ದಾರಿಯುತ ಪಾತ್ರವನ್ನು ನಿಭಾಯಿಸಲು ಸಾಧ್ಯವಾಯಿತು ಎನ್ನುವುದು ಹೆಮ್ಮೆ ಮೂಡಿಸುತ್ತದೆ. ಮಗಳ ಜೊತೆ ತಾಯಿ ಹೇಗೆ ತನ್ನ ಜೀವನ ಸಾಗಿಸುತ್ತಾಳೆ ಎನ್ನುವುದು ಇಲ್ಲಿನ ಪ್ರಧಾನ ಅಂಶ. ಅವಳಿಲ್ಲದೆ ಇದ್ದರೆ ಬದುಕುವುದೇ ಇಲ್ಲವೇನೊ ಎನ್ನುವ ಮಟ್ಟಿಗೆ ಈಕೆ ಭಾವುಕಳಾಗಿದ್ದಾಳೆ. ನಾವು ನಮ್ಮ ಪೋಷಕರ ಪಾಲನೆಯಲ್ಲಿ ಹೇಗೆ ಬೆಳೆದಿದ್ದೇವೆ, ಅವರ ತ್ಯಾಗ ಏನು ಎನ್ನುವುದು ನೆನಪಾಗುತ್ತದೆ. ಒಂದು ರೀತಿಯ ತೃಪ್ತ ಭಾವ ಮೂಡುತ್ತದೆ. ಮಗು ಇರುವುದರಿಂದ ಸೆಟ್‌ನಲ್ಲಿ ಸಮಯ ಹೋಗುವುದೇ ಗೊತ್ತಾಗುವುದಿಲ್ಲ. ಮಗುವನ್ನು ಆಧರಿಸಿ ನನ್ನ ನಟನೆಯನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಇದರಿಂದ ನಾನೂ ಕಲಿಯುತ್ತಿದ್ದೇನೆ. ಮಕ್ಕಳನ್ನು ಬೆಳೆಸುವುದು ತುಂಬ ಕಷ್ಟ. ಸಹನೆ ಬೇಕು. ಇಲ್ಲಿ ಮಗಳು ತುಂಬ ಚೆನ್ನಾಗಿ ನಟಿಸುತ್ತಾಳೆ. ದೊಡ್ಡ ದೊಡ್ಡ ಡೈಲಾಗ್‌ಗಳನ್ನೂ ನೆನಪಿಟ್ಟುಕೊಂಡು ಹೇಳುತ್ತಾಳೆ. ಸವಾಲಿನಿಂದ ಕೂಡಿದೆ.

◆ **'ರಾಧಾ ರಮಣ'ದ ಮದುವೆಯ ಘಟನೆ ದೊಡ್ಡ ಸದ್ದು ಮಾಡಿತು. ಏನದರ ವಿಶೇಷ?**

ಕಥೆ ಮದುವೆಯಿಂದಲೇ ಆರಂಭವಾಗುತ್ತದೆ. ಆ ಕಥೆಗೆ ಬೇರೆ ಬೇರೆ ಆಯಾಮಗಳಿದ್ದವು. ಅನೇಕ ಕವಲಿನ ಮಾರ್ಗವನ್ನು ಹಿಡಿದು ಸಾಗಿತು. ಅದು ನನಗೆ ಸಿಕ್ಕ ಮೊದಲ ಅವಕಾಶ ಆದರೂ ಸೂಪರ್ ಹಿಟ್ ಆಯಿತು ಎಂದೆನಿಸುತ್ತದೆ. ಒಳ್ಳೆಯ ಕಥೆ ಇತ್ತು, ನನ್ನ ಪಾತ್ರವೂ ವಿಸ್ತಾರವಾಗಿ ಬೆಳೆಯಿತು. ಆ ತಂಡದ ಜೊತೆ ಕೆಲಸ ಮಾಡಬೇಕು ಎನ್ನುವ ಆಸೆ ಇದೆ. ಆದರೆ ಸಮಯದ ಅಭಾವದಿಂದ ನನಗೆ ಅವಕಾಶ ಆಗುತ್ತಿಲ್ಲ. ಅದಾಗಿ ಐದು ವರ್ಷಗಳ ನಂತರ ಮತ್ತೆ ಕನ್ನಡಕ್ಕೆ ಬಂದಿದ್ದೇನೆ.

◆ **ನಟನೆಯ ಪ್ರೀತಿ ನಿಮ್ಮಲ್ಲಿ ಮೂಡಿದ್ದು ಹೇಗೆ?**

ತೀರಾ ಆಕಸ್ಮಿಕ ಎಂದು ಹೇಳಬಹುದು. ಮೂಲತಃ ಭರತನಾಟ್ಯ ಕಲಾವಿದೆ. ಅದರಲ್ಲಿ ವಿದ್ವತ್ತು ಮಾಡಿದ್ದೇನೆ. ನಂತರ ಡಾನ್ಸ್ ತರಗತಿ ಮಾಡುತ್ತಿದ್ದೆ. ಅದರ ಜೊತೆ ಪದವಿ ಅಧ್ಯಯನವೂ ಮುಂದುವರಿದಿತ್ತು. ನನಗೆ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡಬೇಕು ಎನ್ನುವ ಆಸೆ ಇತ್ತು. ಆ ನಿಟ್ಟಿನ ಪ್ರಯತ್ನದಲ್ಲಿಯೇ ಇದ್ದೆ. ಮುಖ್ಯ ಪರೀಕ್ಷೆ ಬರೆಯಲು ಸಾಧ್ಯ ಆಗಲಿಲ್ಲ. ಅದೇ ಸಂದರ್ಭದಲ್ಲಿ ನನ್ನ ಫೇಸ್‌ಬುಕ್ ಖಾತೆಯಲ್ಲಿ ಫೋಟೊಗಳನ್ನು ನೋಡಿ, ಕಲರ್ಸ್ ಕನ್ನಡದಿಂದ ಫೋನ್ ಬಂತು. ಅದಾಗಿ ಆರು ತಿಂಗಳ ನಂತರ ನನ್ನ ಲುಕ್ ಟೆಸ್ಟ್ ಕಳಿಸಿದೆ. ಅದೃಷ್ಟ ಅನ್ನಬೇಕೋ ಏನೋ ಆ ಅವಕಾಶ ನನಗೆ ಸಿಕ್ಕಿತು. ನಟನೆಯನ್ನು ನಾನು ಕಲಿಯಲಿಲ್ಲ. ಓದುವಾಗ ಶಾಲೆಗಳಲ್ಲಿ ನಾಟಕಗಳನ್ನು ಮಾಡಿದ್ದು ಬಿಟ್ಟರೆ, ಮತ್ತೆಂದೂ ಅಭ್ಯಾಸ ಮಾಡಲಿಲ್ಲ. ನನ್ನ ತಂದೆ ರಂಗಭೂಮಿ ಕಲಾವಿದರು. ನಾನೂ ನಟಿ ಆದರೆ ಚೆನ್ನಾಗಿರುತ್ತೆ ಎನ್ನುವ ಅಭಿಪ್ರಾಯ ತಂದೆಗೆ ಇತ್ತು. ಸುಮ್ಮನೆ ಪರೀಕ್ಷಿಸುವ ದೃಷ್ಟಿಯಲ್ಲಿ ಮೊದಲ ಆಡಿಷನ್ ನೀಡಿದ್ದೆ. ಕೊನೆಗೆ ಅದೇ ನನ್ನನ್ನು ಪ್ರೀತಿಸುವಂತೆ ಮೋಡಿ ಮಾಡಿತು.

◆ **ತೆಲುಗು ಅಭಿನಯದ ಅನುಭವ ಹಂಚಿಕೊಳ್ಳಬಹುದಾ?**

'ರಾಧಾ ರಮಣ' ಜೊತೆ ಜೊತೆ ತೆಲುಗು ಕಿರುತೆರೆಯಲ್ಲಿಯೂ ಕೆಲಸ ಆರಂಭಿಸಿದೆ. ನಂತರ ಅಲ್ಲೇ ಹೆಚ್ಚು ಬಿಜಿ ಆದೆ. ಆ ಪ್ರಾಜೆಕ್ಟ್‌ನಲ್ಲಿ ಸುಮಾರು ನಾಲ್ಕು ವರ್ಷ ಕೆಲಸ ಮಾಡಿದೆ. 'ಸೂರ್ಯಕಾಂತಂ' ಮುಗಿಯುತ್ತಿದ್ದಂತೆ ತಮಿಳು ಸನ್ ಟೀವಿಯಲ್ಲಿ ಕೆಲಸ ಆರಂಭಿಸಿದೆ. ಅದರ ಜೊತೆಗೆ ಉದಯದ 'ಅನುಪಲ್ಲವಿ'ಗೆ ಬಂದಿದ್ದೇನೆ. ಒಂದೇ ಸಂಸ್ಥೆಯಲ್ಲಿ ಎರಡು ಧಾರಾವಾಹಿಗಳನ್ನು ಮಾಡುತ್ತಿದ್ದೇನೆ. ಇದೇ ಸಮಯದಲ್ಲಿ ಸಿನಿಮಾಕ್ಕೂ ಅವಕಾಶ ಬಂದಿವೆ. ಈಗ ಆ ಕಡೆ ಗಮನ ಕೊಡಲು ಸಾಧ್ಯವಾಗುತ್ತಿಲ್ಲ. ಮಾಡಲೇಬೇಕು ಎನ್ನುವ ಸಂಕಲ್ಪವಿದೆ. ಅದಕ್ಕೆ ಸಮಯ ಸಿಗಬೇಕು. ಅಲ್ಲಿ ಒಳ್ಳೆಯ ಸಿನಿಮಾ–ಒಳ್ಳೆಯ ಪಾತ್ರ ಅನ್ನುವುದು ಮಾತ್ರ ನನ್ನ ಆಯ್ಕೆ. ಅದರಲ್ಲೂ ಕನ್ನಡದಲ್ಲಿಯೇ ಮೊದಲು ಮಾಡಬೇಕು ಎನ್ನುವುದು ಆಸೆ. ಕನ್ನಡದಲ್ಲಿ ಹೊಸ ಹೊಸ ಪ್ರತಿಭಾವಂತ ಕಲಾವಿದರಿಗೆ ಒಳ್ಳೆಯ ಅವಕಾಶ ಸಿಗುತ್ತಿದೆ. ■

